ಅಧ್ಯಕ್ಷರು.—ತಾವು ಕೇಳಿರುವುದು ಅಂತರ್ಜಲ ಸಮೀಕ್ಷೆ ಸಂಬಂಧಪಟ್ಟ ಗಿರಿಜನೆಯ ಪ್ರಶ್ನೆ ಇದು ಮೈನ್ಸ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟಿಗೆ ಬರುತ್ತದೆ. ನೀವು ಲೋಕೋಪಯೋಗಿ ಇಲಾಖೆಯವರಿಗೆ ಕೊಟ್ಟಿದ್ದೀರಿ. ಆದರೆ ಇದು ಮೈನ್ಸ್ ಅಂಡ್ ಜಿಯಾಲಜಿ ಇಲಾಖೆಗೆ ಸಂಬಂಧಪಡುತ್ತದ್ದು ಇದನ್ನು ಮುಂದಿನವಾರ ತೆಗೆದುಕೊಳ್ಳುತ್ತೇನೆ.

ಕೊಪ್ಪಾ ತಾಲ್ಲೂಕಿನಲ್ಲಿ ನ್ಯಾಯಾಲಯ ಸ್ಥಾಪನೆ

೧೨೯೯. ಶ್ರೀ ಯು.ಕೆ. ಶಾಮಣ್ಣ (ಶೃಂಗೇರಿ).—ಮಾನ್ಯ ಯೋಜನೆ, ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪ್ರತಿ ತಾಲ್ಲೂಕಿಗೆ ಒಂದು ನ್ಯಾಯಾಲಯ ಕೊಡುವ ಯೋಜನೆಯೇನಾದರೂ ಸರ್ಕಾರದ ಮುಂದಿದೆಯೆ ?

ಆ) ಹಾಗಿದ್ದಲ್ಲಿ, ಚಿಕ್ಕಮಗಳೂರು ಜಿಲ್ಲಾ, ಕೊಪ್ಪಾ ತಾಲ್ಲೂಕಿಗೆ ನ್ಯಾಯಾಲಯ ಮಂಜೂರು ಮಾಡಲಾಗುವುದೆ ?

ಇ) ಇಲ್ಲಿ ನ್ಯಾಯಾಲಯ ಪ್ರಾರಂಭಿಸಲು ಸರ್ಕಾರಕ್ಕಿರುವ ತೊಂದರೆಯೇನು ?

ಶ್ರೀ ಎಂ. ವೀರಪ್ಪ ಮೊಯ್ಲಿ (ಯೋಜನೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಪ್ರವಾಸೋದ್ಯಮ ಮಂತ್ರಿಗಳು).—

ಅ) ರಾಜ್ಯದ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಎಲ್ಲೆಲ್ಲಿ ಕೋರ್ಟ್‌ಗಳು ಇರುವುದಿಲ್ಲವೋ ಅಂತಹ ತಾಲ್ಲೂಕುಗಳಲ್ಲಿ ಮುನ್ಸೀಫ್ ಮತ್ತು ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ಫರ್ಸ್ಟ್ ಕ್ಲಾಸ್ ಕೋರ್ಟ್‌ಗಳನ್ನು ಸ್ಥಾಪಿಸುವ ಇಚ್ಛೆಯನ್ನು ಸರ್ಕಾರವು ಹೊಂದಿರುತ್ತದೆ.

ಆ) ವಿಷಯವು ಉಚ್ಚ ನ್ಯಾಯಾಲಯದ ಪರಿಶೀಲನೆಯಲ್ಲಿದೆ.

ಇ) ಸರ್ಕಾರವು ಉಚ್ಚ ನ್ಯಾಯಾಲಯದಿಂದ ಪ್ರಸ್ತಾವನೆಯನ್ನು ಸ್ವೀಕರಿಸಿದ ನಂತರ ದೊರೆಯುವ ಸಂಪನ್ಮೂಲಗಳಿಗೊಳಪಟ್ಟು ಪರಿಶೀಲಿಸುತ್ತದೆ.

ಶ್ರೀ ಯು. ಕೆ. ಶಾಮಣ್ಣ.—ಸನ್ಮಾನ್ಯ ಅಧ್ಯಕ್ಷರೆ, ಪ್ರತಿಯೊಂದು ತಾಲ್ಲೂಕಿಗೆ ಒಂದು ಕೋರ್ಟನ್ನು ಕೊಡಬೇಕು ಎಂದು ೧೦–೧೨ ವರ್ಷಗಳಿಂದಲೂ ನಾವು ಕೇಳುತ್ತಾ ಇದ್ದೇವೆ. ಆದರೆ ಇದೇ ರೀತಿ ಉತ್ತರ ಸಿಗುತ್ತಾ ಇದೆ. ಮುನ್ಸೀಫ್ ಕೋರ್ಟ್ ಬೇಕು, ಕೊಡುತ್ತೇವೆ. ಈ ವಿಷಯ ಉಚ್ಚ ನ್ಯಾಯಾಲಯದ ಪರಿಶೀಲನೆಯಲ್ಲಿದೆ ಎನ್ನುವ ಉತ್ತರ ದೊರೆಯುತ್ತಾ ಇದೆ. ಇದಕ್ಕೆ ಎಷ್ಟು ವರ್ಷ ಕಾಲ ಬೇಕು, ಆದಷ್ಟು ಬೇಗ ಮಾನ್ಯ ಮಂತ್ರಿಯವರು ಇದರ ಬಗ್ಗೆ ಗಮನಹರಿಸಿ ನ್ಯಾಯಾಲಯದ

ಹೆಚ್ಚಿನ ಅನುಕೂಲವನ್ನು ದೊರಕಿಸಿಕೊಡಬೇಕು. ಮಲೆನಾಡಿನ ಮೂಲೆ ಭಾಗಿರುವಂಥ ಕೊಪ್ಪಕ್ಕೆ ೬೦-೭೦ ಮೈಲಿ ಸುತ್ತಳತೆಯಿಂದ ಜನ ಅಲ್ಲಿಗೆ ಬರಬೇಕಾಗಿದೆ. ಆದ್ದರಿಂದ ಅತಿಮುಖ್ಯವಾಗಿ, ಆವಶ್ಯಕವಾಗಿ ಕೋರ್ಟ್ ಬೇಕು. ಅದ್ದರಿಂದ ತಾವು ಈ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಬೇಕು ಎಂದು ಈ ಸಂದರ್ಭದಲ್ಲಿ ಮತ್ತೆ ಕೇಳಿಕೊಳ್ಳುತ್ತಾ ಇದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಸೂಚನೆಯನ್ನು ಪುನಃ ನಾವು ಜ್ಞಾಪನ ಪತ್ರದ ಮೂಲಕ ಉಚ್ಚನ್ಯಾಯಾಲಯಕ್ಕೆ ತಿಳಿಸುತ್ತೇವೆ.

ನ್ಯಾಯಬೆಲೆ ಅಂಗಡಿಗಳ ಬಗ್ಗೆ

೧೧೬೧. ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ ?

ಅ) ಬೆಂಗಳೂರು ನಗರದ ರಾಜಾಜಿನಗರದಲ್ಲಿ ದಿನನಿತ್ಯ ಪಡಿತರ ವಸ್ತುಗಳನ್ನು ವಿತರಣೆ ಮಾಡುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು ?

ಆ) ಈ ಪೈಕಿ ಸಹಕಾರ ಸಂಘಗಳ ಅಂಗಡಿಗಳೆಷ್ಟು ? ಹಾಗೂ ಖಾಸಗಿಯವರ ಅಂಗಡಿಗಳೆಷ್ಟು?

ಇ) ಈ ಖಾಸಗಿ ನ್ಯಾಯಬೆಲೆ ಅಂಗಡಿಯವರು ಹಾಗೂ ಸಹಕಾರ ಸಂಘಗಳು ನಡೆಸುತ್ತಿರುವ ನ್ಯಾಯಬೆಲೆ ಅಂಗಡಿಯವರು ಆಹಾರ ಪದಾರ್ಥಗಳನ್ನು ಸರಿಯಾಗಿ ವಿತರಣೆ ಮಾಡುತ್ತಿಲ್ಲದಿರುವುದರ ಬಗ್ಗೆ ದೂರುಗಳೇನಾದರು ಬಂದಿದೆಯೇ ?

ಈ) ಬಂದಿದ್ದಲ್ಲಿ ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಆಜೀಜ್ ಸೇಠ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

ಅ) ೧೫೪.

ಆ) ೩೧ ಸಹಕಾರ ಸಂಘ
೨೪ ಕೆ.ಎಫ್.ಸಿ.ಎಸ್.ಸಿ.
೯೯ ಖಾಸಗಿಯವರು.

ಇ) ಹೌದು.

ಈ) ಆರೋಪಗಳ ತನಿಖೆಯ ನಂತರ ೭ ನ್ಯಾಯ ಬೆಲೆ ಅಂಗಡಿಯವರಿಗೆ ಎಚ್ಚರಿಕೆಯ ನೋಟೀಸುಗಳನ್ನು ನೀಡಲಾಗಿದೆ ಮತ್ತು ೩ ನ್ಯಾಯ ಬೆಲೆ ಅಂಗಡಿಗಳ ಮೇಲಿನ ಪ್ರಕರಣಗಳು ವಿಚಾರಣೆಯಲ್ಲಿರುತ್ತವೆ.